ಶ್ರೀ ಹಾಗೋಡು ತಿಮ್ಮಪ್ಪ :— ನೀವು ಮೂವತ್ತು ಕೋಟಿ ರೂಪಾಯಿಗಳಿಗೆ ಕಾರ್ಯಕ್ರಮ ರೂಪಿಸಿ ಅಪ್ರೂವಲ್ ಕೊಟ್ಟಿದ್ದರೊ ಇಲ್ಲವೊ ಅದರ ಪ್ರಹಾರ ಕೆಲಸವಾಗಿದೆಯೋ ಇಲ್ಲವೋ, ಇವತ್ತು ಆ ಮೂವತ್ತು ಕೋಟಿ ರೂಪಾಯಿಗಳನ್ನು ಕೊಡಿ.

ಶ್ರೀ ಸಿದ್ಧರಾಮಯ್ಯ :— ಈಶ್ವರಪ್ಪನವರೆ ಕೇಳಿ, ಕಳೆದ ವರ್ಷ ಏನು ಪ್ಲಾನ್ ಕಟ್ ಆಯಿತು, ಅದನ್ನು ಕಟ್ ಮಾಡಬೇಡಿ, ನಮಗೆ ಆ ಹಣವನ್ನು ಸೇರಿಸಿಕೊಡಿ, ಅದನ್ನು ಸೇರಿಸಿ ಆಕ್ಷನ್ ಪ್ಲಾನ್ ಮಾಡಿಬಿಟ್ಟಿದ್ದೇವೆ ಎಲ್ಲವನ್ನೂ ಸೇರಿಸಿ ಕೊಡಿ ಎಂದು ಅವರು ಹೇಳುವುದು. ನಾನು ಅವರೊಡನೆ ಕುಳಿತು ಮಾತನಾಡಿ ಇನ್ನು ಎಷ್ಟು ಕೊಡುವುದಕ್ಕೆ ಸಾಧ್ಯವೊ ನೋಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ಸಭಾಧ್ಯಕ್ಷರೆ, ಈ ಮಲೆನಾಡು ಅಭಿವೃದ್ಧಿಮಂಡಳಿಗೆ ಇವರೇನು ಪ್ರಾಮಾಣಿಕವಾಗಿ ಹಣ ಕೊಡಬೇಕಾಗಿತ್ತು ಅದನ್ನು ಕೊಡುತ್ತಿಲ್ಲ. ಮತ್ತೆ ಪ್ರತಿ ಶಾಸಕರ ಕ್ಷೇತ್ರಗಳಿಗೆ ಪಾರ್ಲಿಮೆಂಟ್ ಸದಸ್ಯರಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು ಅದನ್ನು ಕೇಳಿದ್ದು ಅದನ್ನು ಕೊಡುತ್ತಿಲ್ಲ, ಅದನ್ನು ಕೊಡಬೇಕೆಂದು ಒತ್ತಾಯ ಮಾಡಿ ನಾನು ಧರಣಿ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಈ ಸಂದರ್ಭದಲ್ಲಿ ಸದನದ ಬಾವಿಗೆ ಬಂದು ಧರಣಿ ಕುಳಿತರು)

ಶ್ರೀ ಕೆ.ಎಸ್. ಈಶ್ವರಪ್ಪ :— ಈ ಆಯವ್ಯಯದಲ್ಲಿ ಕೈಗಾರಿಕೋದ್ಯಮಿಗಳು ಸೇರಿದಂತೆ ಎಲ್ಲರಿಗೆ ದ್ರೋಹ ಮಾಡಿದ್ದಾರೆ, ಸರ್ಕಾರದ ಬಡ್ಜೆಟ್ ವಿರುದ್ಧವಾಗಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ಶ್ರೀ ಕೆ.ಎಸ್. ಈಶ್ವರಪ್ಪನವರು ಸೇರಿದಂತೆ ಎಲ್ಲಾ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿದ್ಧರಾಮಯ್ಯ :— ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ಎಂಪಿಗಳ ರೀತಿ ಎಂಎಲ್‌ಎಗಳಿಗೆ ಕೊಡಿ ಎಂದು ಕೇಳಿದರೆ ಅದು ಸಾಧ್ಯವಿಲ್ಲ. ನಾವು ಈ ಸಾರಿ ಪಿಡಬ್ಲ್ಯೂಡಿನಲ್ಲಿ ಹೆಚ್ಚು ಹಣವನ್ನು ಇಟ್ಟಿದ್ದೇವೆ, ಆಯಾ ಎಂಎಲ್‌ಎ ಕ್ಷೇತ್ರದಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡುವ ಪ್ರಯತ್ನವನ್ನು ಮಾಡುತ್ತೇವೆ ಇಷ್ಟು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಯವರ ಗಮನಕ್ಕೆ ಎರಡು ಅಂಶಗಳನ್ನು ತರುವುದಕ್ಕೆ ಬಯಸುತ್ತೇನೆ.